ರಾಣೆಬೆನ್ನೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ

೩೬೪ ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರು ನಗರಕ್ಕೆ ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಸರಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಇದೆ.

ಆ) ಈ ಪ್ರಸ್ತಾವನೆಯು ಸರಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ನಗರವು ಸುಮಾರು ೮೦ ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ಪಟ್ಟಣ. ಇವತ್ತಿನವರೆಗೂ ಸಹಿತ ಅಲ್ಲಿ ಆರೋಗ್ಯ ದೃಷ್ಟಿಯಿಂದ ಯಾವ ಫೆಸಿಲಿಟಿ ಇದೆ ಅದನ್ನು ನೋಡಿದರೆ ಅದು ತಲೆತಗ್ಗಿಸಬೇಕಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಬರವಣಿಗೆ ಮೂಲಕಾಂತರ ತಕ್ಷಣ ಇದನ್ನು ಮಂಜೂರು ಮಾಡಬೇಕೆಂದು ಅದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆಜ್ಞೆಯನ್ನು ಮಾನ್ಯ ಆರೋಗ್ಯ ಸಚಿವರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ಯಾವ ಕಾರ್ಯಕ್ರಮ ಹಾಕಿದ್ದೀರಿ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಕೆ.ಬಿ. ಕೋಳಿವಾಡ.—ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ೪೬ ಆಸ್ಪತ್ರೆಗಳಲ್ಲಿ ೨, ೧೦, ೧೬, ೨೫, ೪೦ ಬೆಡ್ಸ್ ಇವೆ ಇವುಗಳನ್ನು ಹಂತಹಂತವಾಗಿ ಅಪ್‌ಗ್ರೇಡ್ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ರಾಣೆಬೆನ್ನೂರ್ ಆಸ್ಪತ್ರೆಯನ್ನು ತಕ್ಷಣ ಅಪ್‌ಗ್ರೇಡ್ ಮಾಡಬೇಕೆಂದು ಹೇಳಿದಮೇಲೆ ಅಲ್ಲಿಗೆ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ಕಾರ್ಯಕ್ರಮ ತೆಗೆದು ಕೊಂಡಿದ್ದೇವೆ, ಅದನ್ನು ಆದಷ್ಟು ಬೇಗ ಮಂಜೂರು ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ.—ಬಿಲ್ಡಿಂಗ್ ವಗೈರೆ ಕಟ್ಟಲಿಕ್ಕೆ ತಾವು ಟೈಮ್ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇದೇ ಬಿಲ್ಡಿಂಗ್‌ನಲ್ಲಿ ೪೦ ಹಾಸಿಗೆಗಳಿಂ ಇವೆ. ಎಕ್ಸ್‌ರೇ ಪ್ಲಾಂಟ್ ಇದೆ. ಡೆಂಟಲ್ ಪ್ಲಾಂಟ್ ಇದೆ. ಆದುದರಿಂದ ಅಲ್ಲಿ ವೈದ್ಯರುಗಳನ್ನು ಹೆಚ್ಚಾಗಿ ಕೊಟ್ಟು ಔಷಧಿ ಹೆಚ್ಚಾಗಿ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಮಗೆ ಬಂದಿರತಕ್ಕಂಥ ವರದಿ ಪ್ರಕಾರ ಅಲ್ಲಿ ೨೪ ಹಾಸಿಗೆ ಗಳು ಮಾತ್ರ ಇವೆ. ಅದನ್ನು ಜನರಲ್ ಆಸ್ಪತ್ರೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ೪೦ ಹಾಸಿಗೆಗಳು ಇವೆ ಎಂದು ಹೇಳಿದ್ದಾರೆ. ಅದನ್ನು ಪರೀಕ್ಷೆ ಮಾಡಿ ೩೦ ಹಾಸಿಗೆ ಇದ್ದರೆ ಅದಕ್ಕೆ ಅಗತ್ಯವಾದ ವೈದ್ಯರುಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರ ಆಜ್ಞೆ ಮಾಡಬೇಕಾಗುತ್ತದೆ. ಅದನ್ನು ಪರಿಶೀಲನೆ ಮಾಡಿ ನೋಡಿಸುತ್ತೇನೆ.

ಚಿಂಚೋಳಿ ತಾಲ್ಲೂಕಿನಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಔಷಧಾಲಯಂಗಳು

೩೬೫ ಶ್ರೀ ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಮತ್ತು ಔಷಧಾಲಯಗಳ ಸಂಖ್ಯೆ ಎಷ್ಟು ?